ಮತ್ತು 1x8 ಎಂವಿಎ ಪರಿವರ್ತಕಗಳನ್ನು ಹೆಚ್ಚು ಸಾಮರ್ಥ್ಯದ 2x12.5 ಎಂವಿಎ ಪರಿವರ್ತಕಗಳಿಂದ ಬದಲಿಸಲು ಮಂಜೂರಾತಿ ನೀಡಿದ್ದು ಕೀಪ್ರದಲ್ಲಿ ಈ ಕೆಲಸ ಕೈಗೆತ್ತಿಕೊಳ್ಳಬೇಕಾಗಿದೆ.

3. ಬೊಮ್ಮಲಾಪುರದಲ್ಲಿ 1x6.3 ಎಂವಿಎ ಸಾಮರ್ಥ್ಯದ 66/11 ಕೆ.ವಿ ಹೊಸ ಸ್ಟೇಷನ್ ಕೆಲಸ ಪ್ರಗತಿಯಲ್ಲಿದೆ.

4. ತೆರಕಣಾಂಬಿಯಲ್ಲಿರುವ 33/11 ಕೆ.ವಿ. ಸ್ಟೇಷನ್‌ನಲ್ಲಿ ಹಾಕಿ ಇರುವ 1x5 ಎಂವಿಎ ಪರಿವರ್ತಕದ ಜೊತೆಗೆ ಹೆಚ್ಚುವರಿಯಾಗಿ 1x5 ಎಂವಿಎ ಪರಿವರ್ತಕಗಳನ್ನು ಅಳವಡಿಸುವ ಕೆಲಸವನ್ನು ಸದ್ಯದಲ್ಲೇ ಕೈಗೆತ್ತಿಕೊಳ್ಳಲಾಗುವುದು.

5. ತ್ವರಿತ ವಿದ್ಯುತ್ ಸುಧಾರಣೆ ಯೋಜನೆ ಅಡಿಯಲ್ಲಿ 10 ಸಂಖ್ಯೆಯ 11 ಕೆವಿ ಫೀಡರ್‌ಗಳ ಅಭಿವೃದ್ಧಿ ಕೆಲಸಗಳು ಮಂಜೂರಾಗಿದ್ದು ಸದ್ಯದಲ್ಲೇ ಕೆಲಸ ಕೈಗೆತ್ತಿಕೊಳ್ಳಲಾಗುವುದು.

ಪೋಲೀಸ್ ಠಾಣೆಗಳ ಮೇಲ್ದರ್ಜೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 979(1180)

ಸದಸ್ಯರ ಹೆಸರು: ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್(ಗುಂಡ್ಲುಪೇಟೆ)

ಪ್ರಶ್ನೆ

ಅ) ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಪೊಲೀಸ್ ಉಪ ಠಾಣೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಉದ್ದೇಶಿಸಿದೆಯೇ?

ಆ) ಹಾಗಿದ್ದರೆ, ಮೇಲ್ದರ್ಜೆಗೇರಿಸಲು ಕೈಗೊಂಡಿರುವ ಕ್ರಮಗಳೇನು?

ಇ) ಕಬ್ಬಳ್ಳಿ ಗ್ರಾಮದಲ್ಲಿರುವ ಪೊಲೀಸ್ ಔಟ್‌ಪೋಸ್ಟ್ ಅವಶ್ಯಕತೆ ಇದೆಯೇ?

ಉತ್ತರಿಸಲಿರುವ ಸಚಿವರು: ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು)

ಉತ್ತರ

ಅ) 2001-2002ನೇಯ ಸಾಲಿನಲ್ಲಿ ಈ ಹೊರ ಠಾಣೆಯನ್ನು ಮೇಲ್ದರ್ಜೆಗೇರಿಸುವ

ಯೋಜನೆಯಿರುವುದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಹೌದು

ಯಲಹಂಕ ನಗರ ಸಾರಿಗೆ ಬಸ್ಸುಗಳನ್ನು ವರ್ತುಲಾಕಾರದಲ್ಲಿ ಓಡಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 980(1274)

ಸದಸ್ಯರ ಹೆಸರು: ಶ್ರೀ ಪ್ರಭಾಕರ ಬಂಗೇರ(ಬೆಳ್ತಂಗಡಿ)

ಪ್ರಶ್ನೆ

ಆ) ಯಲಹಂಕ ಉಪನಗರಕ್ಕೆ ನಗರ ಸಾರಿಗೆ ಸಂಸ್ಥೆಯ ಬಸ್‌ಗಳನ್ನು ಕೆಂಪೇಗೌಡ ಬಸ್ ನಿಲ್ದಾಣದಿಂದ ಈಗಿರುವ ಮಾರ್ಗದ ಜೊತೆ ಉಪನಗರದ ಬಸ್ ನಿಲ್ದಾಣದ ನಂತರ ಮದರ್‌ಡೈರಿ ಕ್ರಾಸ್‌ನಿಂದ ಜೋಡಿ ರಸ್ತೆ ಮೂಲಕ ದೊಡ್ಡಬಳ್ಳಾಪುರ ರಸ್ತೆಯಲ್ಲಿ ಬಲಕ್ಕೆ ತಿರುಗಿ ಕೇಂದ್ರ ಬಸ್ ನಿಲ್ದಾಣಕ್ಕೆ ಕೆಲವು ಬಸ್ಸುಗಳನ್ನು ಹಾಗೂ ನಂತರ ಅದರ ವಿರುದ್ಧ ದಿಕ್ಕಿನ ಮೂಲಕ ಕೆಲವು ಬಸ್ಸನ್ನು ಓಡಿಸಲು ಇರುವ ತೊಂದರೆ ಏನು?

ಆ) ಯಲಹಂಕದಿಂದ ಯಶವಂತಪುರಕ್ಕೆ ಸಹಕರಿಸುತ್ತಿರುವ ನಗರ ಸಾರಿಗೆ ಬಸ್‌ಗಳನ್ನು ಉಪನಗರದ ಬೈರಿ ಕ್ರಾಸ್ ನಂತರ ನಾಲ್ಕು ಮತ್ತು ಐದನೇ ಹಂತದ ಮೂಲಕ ವರ್ತುಲಾಕಾರವಾಗಿ ಹಾಗೂ ಅದರ ವಿರುದ್ಧ ದಿಕ್ಕಿನ ಮೂಲಕವೂ ಸಹ ಕೆಲವು ಬಸ್‌ಗಳನ್ನು ಓಡಿಸಲು ಇರುವ ತೊಂದರೆಗಳೇನು?

ಇ) ಮೇಲ್ಕಂಡ ಎರಡು ಮಾರ್ಗಗಳಲ್ಲಿ ವರ್ತುಲಾಕಾರವಾಗಿ ಬಸ್‌ಗಳನ್ನು ಓಡಿಸಲು ಸರ್ಕಾರ ಸಮೀಕ್ಷೆ ನಡೆಸಿ ಕ್ರಮ ಕೈಗೊಳ್ಳುವುದೇ?

ಉತ್ತರಿಸಲಿರುವ ಸಚಿವರು: ಶ್ರೀ ಟಿ.ಆರ್.ಸಗೀರ್ ಅಹ್ಮದ್(ಸಾರಿಗೆ ಸಚಿವರು)

ಉತ್ತರ

ಆ) ಯಲಹಂಕ ಉಪನಗರದ ಮದರ್‌ಡೈರಿ ಕ್ರಾಸ್‌ನಿಂದ ಜೋಡಿ ರಸ್ತೆ ಮಾರ್ಗವಾಗಿ ದೊಡ್ಡಬಳ್ಳಾಪುರ ಮುಖ್ಯ ರಸ್ತೆ 1.0 ಕಿ.ಮೀ. ದೂರವಿದ್ದು ಈ ದೂರದ ಜೋಡಿ ರಸ್ತೆಯ ಎರಡೂ ಬದಿಯಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್ ನಿಲುಗಡೆಗಳಿದ್ದು, ಈ